'ಇಂಥವಳನ್ನು ತಪ್ಪು ತಿಳಿದುಕೊಂಡೆನಲ್ಲ' ಎಂದವನು ಪಶ್ಚಾತ್ತಾಪಪಡುತ್ತಾ ಹೊರ ರೂಮಲ್ಲಿ ಕಾದು ಕೂತಿದ್ದ ವಿದ್ಯಾರ್ಥಿನಿಯರತ್ತ ತೆರಳಿ ವೀಣಾ ಪಾಠ ಹೇಳಿಕೊಡುವುದರಲ್ಲಿ ತಲ್ಲೀನನಾದ. ಹುಡುಗಿ ರೆಗ್ಯುಲರ್ ಆಗಿ ಬರದಂತಾದರೂ ಹುಡುಗ ಅನುಮಾನಿಸಲಿಲ್ಲ. 'ನಾನವಳನ್ನು ಮದುವೆಯಾಗ್ತಿದೀನಿ ಕಣ್ರೆ' ಅಂತ ಗುಟ್ಟಾಗಿ ರಾಧಿಕಾಗೆ ಹೇಳಿದ. 'ಜಾತೀ?' ಅಂತ ರಾಧಿಕಾ ಕೇದಾರ ರಾಗವನ್ನು ಗುನುಗಿದಾಗ, 'ನಮ್ಮ ಪ್ರೇಮಕ್ಕೆ ಜಾತಿಮತಗಳ ಹಂಗಿಲ್ಲ ಕಣ್ರೆ' ಎಂದು ರೇಗಿಬಿಟ್ಟ. ಹೆದರುತ್ತಲೇ ಅಜ್ಜನಿಗೂ ತಿಳಿಸಿದ. ಅಜ್ಜ ರೇಗಿ ಕಥಕ್ಕಳಿಯಾಡಿತು. ಕಡೆಗೆ ಅವರೇ ಹೆಣ್ಣು ಕೊಡುವಾಗ ಆಗ್ಲಿಬಿಡು ತಪ್ಪೇನು ಅಂತ ತೆಪ್ಪಗಾಯಿತು. ಆದರೆ, ಅವನ ತಾಯಿ ಒಪ್ಪಲಿಲ್ಲ. ತನ್ನ ಅಣ್ಣನ ಮಗಳನ್ನೇ ಆಗಬೇಕೆಂದು ಹಟಕ್ಕೆ ಬಿದ್ದಳು. ತಮ್ಮ ಜಾತಿ ತಮಗೆ ದೊಡ್ಡದೆಂದೇ ವರಸೆ ತೆಗೆದಳು. ಇವನು ಕೇರ್ ಮಾಡದಿದ್ದಾಗ ಆಕೆ ಅನ್ನ ನೀರು ತ್ಯಜಿಸಿದಳು. ಅಜ್ಜನ ಸಂಧಾನಕ್ಕೂ ಜಗ್ಗಲಿಲ್ಲ. 'ಬ್ರಾಂಬ್ರ ಹುಡ್ಗಿ ಸೆರಗು ಅನಿಷ್ಟ... ಇವನು ಉದ್ಧಾರವಾಗೋಲ್ಲ' ಅಂತಾಕೆ ಹೆದರಿ ಅವರನ್ನೂ ಹೆದರಿಸಿದಳು. ಹುಡುಗನದ್ದು ಅಖಂಡ ಮೌನ, 'ಆ ಡುಮ್ಮಿಯನ್ನು ಲಗ್ನವಾದ್ರೆ ಮನೇಲಿ ಕಾಲಿಡಕೂಡ್ದು' ಎಂದು ರೋಪ್ ಹಾಕಿದಳು ತಾಯಿ. 'ಹೆಂಗೂ ಶಾಲೆ ವಿಶಾಲವಾಗಿದೆ. ಒಂದು ಅಟಾಚ್ಡ್ ಬಾತ್‌ರೂಮ್ ಕಟ್ಟಿಸೋದು. ಒಂದು ಸ್ಟೌ ತಂದು ಇಟ್ಟುಕೊಂಡ್ರಾಯ್ತು ಬಿಡೋ' ಅಜ್ಜನೇ ಸಾಂತ್ವನಿಸಿದ. ಇಷ್ಟೆಲ್ಲಾ ಏರ್ಪಾಡುಗಳಾದರೂ ಹುಡುಗಿ ಮ್ಯೂಸಿಕ್ ಸೆಂಟರ್‌ನತ್ತ ಹಾಯಲಿಲ್ಲ. ಎದೆಗುಂದದ ಹುಡುಗ, 'ಸಾಲಿಗ್ರಾಮ ಮುಟ್ಟಿ ಆಣೆ ಮಾಡಿಲ್ವೆ? ದೊಡ್ಡ ಜಾತಿ ಜನ ಅವರು. ಅದಕ್ಕೆಲ್ಲಾ ಬೆಲೆ ಕೊಡ್ತಾರೆ. ಭಯ ಪಡ್ತಾರೆ' ಎಂದೆಲ್ಲಾ ತನು ಮನವ ಸಂತೈಸಿಕೊಂಡ. ಅಟಾಚ್ಡ್ ಬಾತ್‌ರೂಮ್ ಸಿದ್ಧವಾದ ದಿನವೇ ರಾಧಿಕಾ ಬಂದಳು. ಕೆಟ್ಟ ಸುದ್ದಿ ತಂದಳು. 'ಅವಳ ಮದುವೆ ಫಾರಿನ್ ಟೆಕ್ಕಿ ಜೊತೆಯಂತೆ ಸಾ' ಎಂದು ಉಸುರಿದಳು. 'ನೋನೋ ಐ ಕಾಂಟ್ ಬಿಲೀವ್. ನನಗೆ ಮೋಸ ಮಾಡುವಷ್ಟು ಧೈರ್ಯ ಅವಳಿಗೆಲ್ಲಿದೆ?' ಅಂದ. 'ನಿಮ್ಮಂತಹ ಪುಕ್ಕಲ ಹುಡುಗರ ಜೊತೆ ಸ್ನೇಹ ಇಟ್ಕೊಂಡ್ರೆ ನೀವು ಯಾರಿಗೂ ಹೇಳೋಲ್ಲ. ಬೇಕಾದಾಗ ಬಳಸಿ ಬಿಸಾಕಬಹುದು. ಕಾಲೇಜ್ ಹುಡುಗರಾದ್ರೆ ಡೇಂಜರ್ಸ್ ಅಂತಿದ್ಳು ಸಾ' ಹೆದರುತ್ತಲೇ ರಾಧಿಕಾ ಗೊಣಗಿದಳು. 'ಈ ಮಾತ್ನ ಅವಳು ಹೇಳಿಲ್ಲ ಅಂದ್ರೆ ನಿನ್ನ ಎತ್ತಿ ಮಸೀದಿ ಬಾವೀಲಿ ಹಾಕ್ತೀನಿ' ಎಂದವನು ಒಮ್ಮೆಲೆ ಅರಚಿದ. ಅವಳು ಥಟ್ಟನೆದ್ದು ಹೋದಳು. ಇವಳೇ ಏನೋ ನಾಟ್ಕ ಆಡ್ತಿದಾಳೆ. ನನ್ನ ಹುಡುಗಿ ಅಂಥವಳಲ್ಲ. ನನಗೆ ಕೈಕೊಡೋಳಲ್ಲ. ಮೇಲಾಗಿ ರಾಯರಿಲ್ಲವೆ? ರಾಯರ ಪಟ ನೋಡಿದ. ಏನೂ ತಿನ್ನದೇ ಸರಿಯಾಗಿ ನಿದ್ರಿಸದೆ ಮಂಕಾಗಿಯೇ ಇದ್ದ ಅವನು ಬಂದ ಹುಡುಗಿಯರಿಗೆಲ್ಲಾ ಟ್ಯೂಶನ್ ಹೇಳಿಕೊಟ್ಟ. ಒಬ್ಬನೇ ಕೂತು ರುದ್ರವೀಣೆ ನುಡಿಸಿದ. ಅತ್ತು ಬಡಬಡಿಸಿದ.

★★★

ಹುಡುಗಿ ಬರಲಿಲ್ಲ! ತಲೆಕೆಟ್ಟು ಸೆಕೆಂಡ್ ಶೋ ಸಿನಿಮಾಕ್ಕೆ ಹೋದ. ಸಿನಿಮಾ ಬಿಡುತ್ತಲೇ ಮಧ್ಯರಾತ್ರಿಯನ್ನದೆ ಅವಳ ಮನೆಗೇಹೋದ. ಮನೆಗೆ ದೊಡ್ಡ ಬೀಗ ಹಾಕಿದೆ. ಬೀಗ ಜಗ್ಗಿದ, ಹುಚ್ಚನಂತೆ ಬಾಗಿಲು ಬಡಿದ. ಅಕ್ಕಪಕ್ಕದವರು ಎದ್ದು ಬಂದರು. ವೀಣೆ ಮೇಷ್ಟ್ರನ್ನು ನೋಡಿ ಲೊಚಗುಟ್ಟಿದರು. 'ಅವರು ಊರಿಗೆ ಹೋದ್ರಲ್ಲ ಮೇಷ್ಟ್ರೆ' ಎಂದು ಅನುಕಂಪ ಸೂಸಿದರು. ಇವನು ಬಾಗಿಲಲ್ಲೇ ಕುಸಿದ. ಮುಲ್ಲಾ ಕೂಗುವವರೆಗೂ ಚಳಿಯಲ್ಲಿ ಹಲ್ಲು ಗಟ್ಟಿ ಹಿಡಿದು ಕೂತೇ ಇದ್ದ. ನೆರೆಯವರು ಬಾಗಿಲಿಗೆ ನೀರು ಹಾಕಲು ಬಂದಾಗ ಹಪಹಪಿಸುತ್ತಾ ಜಾಗ ಖಾಲಿ ಮಾಡಿದ. ಶಾಲೆಗೆ ಬಂದು ರಗ್ಗು ಹೊದ್ದು ಮಲಗಿದ. ಒಂಬತ್ತಕ್ಕೆಲ್ಲಾ ಹುಡುಗಿಯರು ಪಾಠಕ್ಕೆ ಬರಲಾರಂಭಿಸಿದರು. 'ರಜಾ ಕಣ್ರೇ...' ಅಂತೇಳಿ ಗದರಿಸಿ ಕಳಿಸಿದ. 'ಎಲ್ಲಿಗೆ ಹೋಗಿದ್ದಾಳು?' ಒಬ್ಬನೇ ಮಾತಾಡಿಕೊಳ್ಳುತ್ತಾ ಅಟಾಚ್ಡ್ ಬಾತ್‌ನಲ್ಲಿ ಶುಚಿರ್ಭೂತನಾಗಿ ಬಂದು ವೀಣೆ ನುಡಿಸುತ್ತಾ ಮಂದಸ್ಮಿತರಾದ ರಾಯರ